ತಿದ್ದುಪಡಿ ಮಾಡುವ ರೀತಿಯಲ್ಲಿ, ರಾಜ್ಯಸರ್ಕಾರದ ಆಗಿನ ಮುಖ್ಯಮಂತ್ರಿಯವರು ತಮ್ಮ ನೇತೃತ್ವದಲ್ಲಿ ಮಾನ್ಯ ಜಗದೀಶ್ ಶೆಟ್ಟರ್, ಮಾನ್ಯ ಬಿ.ಎಸ್ ಯಡಿಯೂರಪ್ಪನವರು ಮತ್ತೆ ತಾವೂ ಕೂಡ ಅದರಲ್ಲಿ ಇದ್ದಿರಿ, ಆಗ ಆಗಿನ ಕೇಂದ್ರ ಸರ್ಕಾರದ ಉಪ ಮುಖ್ಯಮಂತ್ರಿಯವರಿಗೆ ಮನವಿಯನ್ನು ಕೊಟ್ಟಿದ್ದೇವೆ. ಇವತ್ತು ಯಾವ ರೀತಿಯಲ್ಲಿ ತೆಲಂಗಾಣ ಮಾದರಿಯಲ್ಲಿ ಹಾಗೂ ವಿದರ್ಭದಲ್ಲಿ 371 ಅನ್ನು ತಿದ್ದುಪಡಿಮಾಡಿ, ಏನು ಹೆಚ್ಚಿನ ಸವಲತ್ತುಗಳನ್ನು ಕೊಟ್ಟಿದ್ದಾರೆ, ಅದೇ ರೀತಿಯಲ್ಲಿ ಇವತ್ತು ಹಿಂದುಳಿದ ಭಾಗಗಳಿಗೆ ಕೊಡಬೇಕೆಂದು, ಇದೆ, ಅದು ಸಹ ಪರಿಶೀಲನೆಯಲ್ಲಿ ಇದೆ, ಕೇಂದ್ರ ಸರ್ಕಾರಕ್ಕೆ ಮತ್ತೆ ಹೋಗುತ್ತೇವೆ, ಪ್ರಸ್ತಾಪ ಮಾಡುತ್ತೇವೆ ಹಾಗೂ ಒತ್ತಾಯ ಮಾಡುತ್ತೇವೆ.

ಇ) ವಿಷಯ : ಕೊಡಗು ಜಿಲ್ಲೆಯಲ್ಲಿ ಮಳೆಯಿಂದ ಉಂಟಾಗಿರುವ ಹಾನಿ ಬಗ್ಗೆ

ಶ್ರೀ ಕೆ.ಜಿ. ಬೋಪಯ್ಯ (ಮಡಿಕೇರಿ) : ಮಾನ್ಯ ಅಧ್ಯಕ್ಷರೇ, ಎರಡು ದಿವಸಗಳಿಂದ ಕೊಡಗು ಜಿಲ್ಲೆಯಲ್ಲಿ ವಿಪರೀತ ಮಳೆ ಬಂದು, ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ಮನೆಗಳೆಲ್ಲಾ ಕಳೆದುಕೊಂಡಿದ್ದಾರೆ, ರಸ್ತೆ ಸಂಪರ್ಕ ಕಡಿದುಹೋಗಿದೆ, ವಿದ್ಯುತ್ ಸಂಪರ್ಕ ಕಡಿದು ಹೋಗಿದೆ, ಮತ್ತೆ ಏನು ಸಣ್ಣ ಸಣ್ಣ ತೋಟಗಳು ಇವೆ, ಅದಕ್ಕೆ ಹಾಕಿರುವಂತಹ ಎಲ್ಲಾ ಕ,ಟ್ರಿಮೇಡ್ ಬ್ರಿಡ್ಜ್‌ಗಳೆಲ್ಲಾ, ಕೊಚ್ಚಿ ಹೋಗಿ, ಜನರು ಇವತ್ತು ತಿರುಗಾಡದಂತಹ ಪರಿಸ್ಥಿತಿಯಲ್ಲಿದೆ, ಬಹಳಷ್ಟು ತೊಂದರೆಗಳು ಇಡೀ ಜಿಲ್ಲೆಯಲ್ಲಿ ಆಗಿದೆ, ಮೂರು ದಿವಸಗಳಿಂದ, ವಿದ್ಯುತ್ ಸಂಪರ್ಕವಿಲ್ಲದಂತೆ ಆಗಿದೆ, ಮಾನ್ಯ ಕಂದಾಯ ಸಚಿವರು ಇದರ ಬಗ್ಗೆ ತುರ್ತು ಗಮನ ಹರಿಸಿ ಜನರಿಗೆ ಪರಿಹಾರವನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು, ತಮ್ಮ ಮೂಲಕ ಮಾನ್ಯ ಕಂದಾಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜ (ವಿರಾಜ ಪೇಟೆ) : ಮಾನ್ಯ ಅಧ್ಯಕ್ಷರೇ, ವಿರಾಜಪೇಟೆ ತಾಲ್ಲೂಕಿನಲ್ಲೂ ಕೂಡ, ಭಾರೀ ಮಳೆಗಾಳಿಯಿಂದಾಗಿ, ತೀರಾ ಅನಾಹುತಗಳು ಸಂಭವಿಸಿದೆ, ಅದರಲ್ಲಿ ವಿರಾಜಪೇಟೆಯ ನಗದರಲ್ಲಿ ಎರಡು ಮನೆಗಳ ಕುಸಿತವಾಗಿದೆ, ಒಂದು ಮನೆಯ ಕುಸಿತದ ಸಂದರ್ಭದಲ್ಲಿ ಶ್ರೀ ಸುಬ್ರಮಣ್ಯ ಎನ್ನುವವರು, ಮನೆಯಲ್ಲಿ ಮಲಗಿದ್ದಂತಹ ಸಂದರ್ಭದಲ್ಲಿ ಗೋಡೆ ಬಿದ್ದು, ಅವರ ಕಾಲು ಮುರಿದಿದೆ, ಒಂದು ವಿಷಾದದ ಸಂಗತಿ ಎಂದರೆ ಅವರು ಆಸ್ಪತ್ರೆಗೆ ದಾಖಲು ಆಗಿದ್ದಾರೆ, ಮತ್ತೆ ಮನೆ ಕುಸಿತವಾಗಿದ್ದರೂ ಸಂಬಂಧಪಟ್ಟಂತಹ ಕಂದಾಯ ಇಲಾಖೆಯ ಅಧಿಕಾರಿಗಳು ಯಾರೂ ಸಂಪರ್ಕ ಮಾಡಿಲ್ಲ. ಅವರಿಗೆ ಏನಾದರೂ ಸಹಾಯ ಮಾಡಬೇಕೆನ್ನುವ ಉತ್ಸುಕತೆಯನ್ನು ತೋರಿಸಲಿಲ್ಲ, ಇಂತಹ ಸಂದರ್ಭದಲ್ಲಿ ನಾನೇ ಖುದ್ದಾಗಿ ಅವರನ್ನು ಸಂಪರ್ಕ ಮಾಡಿದಂತಹ ಸಂದರ್ಭದಲ್ಲಿ ಅವರಿಗೆ ಕಾಲು ಮುರಿತಕ್ಕೆ ಸ್ಟೀಲ್ ರಾಡ್ ಅನ್ನು ಜೋಡಣೆ ಮಾಡಬೇಕಾಗಿದೆ, ಅದಕ್ಕೆ ತುಂಬಾ ಹಣ ಖರ್ಚಾಗುತ್ತದೆ, ಇದಕ್ಕೆ ತಾವು ಸಹಕಾರವನ್ನು ಕೊಡಿ, ಎಂದು ಶ್ರೀ ಸುಬ್ರಮ್ಮಣ್ಯರವರ ಕುಟುಂಬದವರು ನನ್ನನ್ನು ಸಂಪರ್ಕ ಮಾಡಿದ್ದರು. ಈ

ಸಂದರ್ಭದಲ್ಲಿ ಕಂದಾಯ ಇಲಾಖೆಯ ವತಿಯಿಂದ, ಅವರಿಗೆ ಪರಿಹಾರವನ್ನು ಕೊಡುವುದಕ್ಕೋಸ್ಕರ ತಮ್ಮಲ್ಲಿ ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ, ಅದೇ ರೀತಿಯಲ್ಲಿ ಇನ್ನೊಂದು ಗಹನವಾದಂತಹ ವಿಚಾರವೆನೆಂದರೆ, ಇಲ್ಲಿ ಹೆಚ್ಚಿಗೆ ಮಳೆ ಇರುವುದರಿಂದ, ಸುಮಾರು 600ಕ್ಕೂ ಹೆಚ್ಚು ಗಿರಿಜನರು, ಅರಣ್ಯದಲ್ಲಿ ವಾಸಿಸುತ್ತಿದ್ದಾರೆ, ಅವರ ಗುಡಿಸಲುಗಳು ವ್ಯವಸ್ಥೆ ತೀರಾ ಅವ್ಯವಸ್ಥೆಯಾಗಿದೆ. ಅವರಿಗೆ ಗುಡಿಸಲುಗಳನ್ನು ಪರ್ಯಾಯವಾಗಿ ಕಟ್ಟಿಸಿಕೊಡಬೇಕೆಂದರೂ ಕೂಡ, ಇದಕ್ಕೆ ಅರಣ್ಯದ ಅಧಿಕಾರಿಗಳು ಸಹಕಾರ ಕೊಡದೇ ಇರುವುದರಿಂದ, ಈ ಮಳೆಯ ಕಾರಣ ಬಡವರು, ಮುದುಕರು, ಹೆಂಗಸರು, ಮಕ್ಕಳು, ಸಿಕ್ಕಾಪಟ್ಟೆ ತೊಂದರೆಗೆ ಒಳಪಟ್ಟಿದ್ದಾರೆ, ಅವರಿಗೆ ಈ ಸಂದರ್ಭದಲ್ಲಿ ಪರಿಹಾರ ಏನೆಂದರೆ, ಅವರಿಗೆ ಬೆಚ್ಚನೆಯ ಹೊದಿಕೆ, ಕೊಡುವಂಥಾದ್ದು ಮಾಡಬೇಕು, ಅದರ ಜೊತೆಗೆ ಆ ಗುಡಿಸಲುಗಳಿಗೆ ಅರಣ್ಯ ಕಾಯಿದೆಯಲ್ಲಿ ವ್ಯವಸ್ಥೆಯಲ್ಲಿ ಪರಿಹಾರ ವ್ಯವಸ್ಥೆ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳುವಂಥ ಸಂದರ್ಭದಲ್ಲಿ, ಅವರಿಗೆ ತಕ್ಷಣಕ್ಕೆ, ಪ್ಲಾಸ್ಟಿಕ್‌ನಂತಹ ಟಾರ್‌ಪಾಲ್ ಅಂಥಾದ್ದನ್ನು ಮೇಲು ಅಂದರೆ ಮೇಲು ಹೊದಿಕೆಯನ್ನು ಈ 600 ಕುಟುಂಬಗಳಿಗೂ ಒದಗಿಸಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಅದೇ ರೀತಿಯಲ್ಲಿ ಕಾಫಿ ತೋಟದಲ್ಲಿ ಬಿದ್ದಿರುವಂತಹ ಮರಗಳಿಂದ ರೈತರಿಗೆ ಆಗಿರುವಂತಹ ಹಾನಿಯನ್ನು ಪರಿಹಾರ ರೂಪದಲ್ಲಿ ಕೊಡುವಂಥಾದ್ದಕ್ಕೆ ಅಲ್ಲಿನ ಅಧಿಕಾರಿಗಳು ಉತ್ಸುಕತೆಯನ್ನು ತೋರಿಸಿ, ಅಲ್ಲಿ ಸ್ಥಳ ಪರಿಶೀಲನೆಯನ್ನು ಮಾಡಿ ಅದರ ಅಂದಾಜನ್ನು ಮಾಡಿ, ಅವರಿಗೂ ಸಹಿತ ಪರಿಹಾರವನ್ನು ಕೊಡಿಸಬೇಕೆಂದು, ತಮ್ಮ ಮೂಲಕ ಮಾನ್ಯ ಕಂದಾಯ ಸಚಿವರನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್ ಇದೆ. ನೀವೇ ಮಾತನಾಡಿದರೆ, ಹೇಗೆ; ನಾವು ಮಾತನಾಡುವುದು ಬೇಡವೇ ?

ಅಧ್ಯಕ್ಷರು ; ಮಾನ್ಯ ವಾಟಾಳ್ ನಾಗರಾಜ್‌ರವರೇ, ಮಾನ್ಯ ಏನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆಂಬುದನ್ನು ಕೇಳೋಣ, ತಾವು ದಯಮಾಡಿ ಸಹಕರಿಸಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇವರ ಸರ್ಕಾರಕ್ಕೆ ಏನಾದರೂ ಹೆಸರು ಬರಬೇಕೆಂದರೆ, ಇವರನ್ನು ಸ್ವಲ್ಪ ಹದ್ದುಬಸ್ತಿನಲ್ಲಿ ಇಡಿ, ಇಲ್ಲದಿದ್ದರೆ ಬಹಳ ಅಪಾಯ ಕಾದಿದೆ,

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೇ, ನಾನು ಶೂನ್ಯ ವೇಳೆಯ ವಿಚಾರವನ್ನು ಹೇಳಲ್ಲಿಚ್ಛಿಸುತ್ತೇನೆ. ಶೂನ್ಯ ವೇಳೆಯ ಬಗ್ಗೆ ಏನು ಇದೆಯೆಂದರೆ 'Dictionary of consititutional and Parliamentary terms'

`Zero Hour - Zero Hour proceedings are allowed as a matter of

convention, not sanctioned by any rule of the House. Members raise various mattersof the public importance sometimes leading to unrulyscenes in theHouse. Recently regulated by the Speaker by allowing 7 Members each day to raise very urgent matters with proper notice with each member taking not more than one minute, This has resulted in matters being raised in a more dignified and orderly manners on the floor of the House,"ಮಾನ್ಯ ಅಧ್ಯಕ್ಷರೇ, ಶೂನ್ಯ ವೇಳೆಯಲ್ಲಿ ಸದಸ್ಯರುಗಳಿಗೆ ತಾವು ಹೇಳಬೇಕಾಗುತ್ತದೆ, ಒಂದು ನಿಮಿಷದ ಮೇಲೆ ಹೆಚ್ಚಿನ ಸಮಯವನ್ನು ಇದಕ್ಕೆ ತೆಗೆದುಕೊಳ್ಳಬಾರದು ಎಂದು.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ, ನಾನು ಕೇಳುವಂಥಾದ್ದು ಶೂನ್ಯ ವೇಳೆ ಪ್ರಸ್ತಾಪಕ್ಕೆ ಅನುಮತಿ ನೀಡಲಾಗಿದೆಯೇ, ಇಲ್ಲವೇ ಎಂಬುದನ್ನು ಮೊದಲು ಹೇಳಲಿ, ಆಮೇಲೆ How to conduct the House,

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೇ, ದಯಮಾಡಿ ಎಲ್ಲಾ ಸದಸ್ಯರಿಗೂ ಹೇಳಬೇಕಾಗುತ್ತದೆ, ಇಲ್ಲದಿದ್ದರೆ ಇದು ಇಲ್ಲಿ ಭಾಷಣವಾಗುತ್ತದೆ. ಸಭೆಯಲ್ಲಿ ಅಜೆಂಡಾದ ಪ್ರಕಾರ ಕಾರ್ಯಕಲಾಪಗಳು ನಡೆಯದಿದ್ದರೆ ಏನು ಪ್ರಯೋಜನ ? ಅದಕ್ಕೆ ಮಾನ್ಯ ಸದಸ್ಯರು ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮಾತನಾಡಬಹುದು. ಆದುದರಿಂದ ತಾವು ದಯಮಾಡಿ ಮಾನ್ಯ ಸದಸ್ಯರುಗಳಿಗೆ ಈ ಬಗ್ಗೆ ಹೇಳುತ್ತಿರೆಂದು ನಾನು ಭಾವಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಅದಕ್ಕೂ ಮೊದಲು ತಾವು ದಯಮಾಡಿ ಶೂನ್ಯ ವೇಳೆಯನ್ನು ನಿಗದಿ ಮಾಡಿದ್ದೀರಾ ಎಂದು ಕೇಳುತ್ತಿದ್ದೇನೆ, ಇವತ್ತು ಶೂನ್ಯ ವೇಳೆ ಇತ್ತಾ ? ಅಧ್ಯಕ್ಷರು, ಶೂನ್ಯ ವೇಳೆಯನ್ನು ಅಲೋ ಮಾಡಿದ್ದೀರಾ, ಅಥವಾ ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಎಮರ್ಜೆನ್ಸಿ ವಿಷಯವನ್ನು ಪ್ರಸ್ತಾಪ ಮಾಡಲು ಅಲೋ ಮಾಡಿದ್ದೀರಾ ಎಂದು ನಾನು ಕೇಳುತ್ತಿರುವಂಥಾದ್ದು, ಇವತ್ತು ಶೂನ್ಯ ವೇಳೆಯನ್ನು ಅಲೋ ಮಾಡಿಲ್ಲ,

ಶ್ರೀ ಪಿ.ಜಿ.ಆರ್. ಸಿಂಧ್ಯ (ಬೃಹತ್ ಕೈಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಕಂದಾಯ ಸಚಿವರ ಪರವಾಗಿ ಉತ್ತರವನ್ನು ಕೊಡುತ್ತೇನೆ. ಈ ಸದನದ ಸದಸ್ಯರು, ಮಡಕೇರಿ ವಿಧಾನಸಭಾ ಕ್ಷೇತ್ರದ ಶಾಸಕರು ಆದ, ಮಾನ್ಯ ಬೋಪಯ್ಯನವರ ತಮ್ಮ ಮೂಲಕವಾಗಿ, ಈ ಸರ್ಕಾರದ ಗಮನವನ್ನು ಸೆಳೆದಿದ್ದಾರೆ, ಕೊಡಗು ಜಿಲ್ಲೆಯಲ್ಲಿ ಕಳೆದ ಎರಡು ದಿವಸಗಳಿಂದ ಭಾರಿ ಮಳೆಯಾಗಿರುವುದರಿಂದ, ಆಗಿರುವಂತಹ ಅನಾಹುತದ ಬಗ್ಗೆ, ಸಾರ್ವಜನಿಕರ ಆಸ್ತಿಪಾಸ್ತಿಗಳಿಗೆ, ಆಗಿರುವಂತಹ ನಷ್ಟದ ಬಗ್ಗೆ, ಮತ್ತೆ ಇನ್ನು ಅನೇಕ ರೀತಿಯ ವಿಚಾರಗಳ ಬಗ್ಗೆ, ಮತ್ತೆ ವಿದ್ಯುತ್‌ನ ಸಂಪರ್ಕ ಅಸ್ತವ್ಯಸ್ತದ

ಬಗ್ಗೆ, ರಸ್ತೆಗಳು ಅಸ್ತವ್ಯಸ್ತವಾಗಿರುವುದರ ಬಗ್ಗೆ, ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದಿದ್ದಾರೆ, ಮತ್ತೆ ಮಾನ್ಯ ಹೆಚ್.ಡಿ. ಬಸವರಾಜ್‌ರವರು ಸಹ ವಿರಾಜಪೇಟೆಯಲ್ಲಿ ಆಗಿರುವಂತಹ ನಷ್ಟದ ಬಗ್ಗೆ, ವಿಶೇಷವಾಗಿ ಕಾಡಿನಲ್ಲಿರುವಂತಹ ಗಿರಿ ಜನರ ಬಗ್ಗೆ, ಪ್ರಸ್ತಾಪ ಮಾಡಿದ್ದಾರೆ, ನಾನು ಸರ್ಕಾರದ ಪರವಾಗಿ, ಮಾನ್ಯ ಕಂದಾಯ ಸಚಿವರು ಇವತ್ತು, ಅಥವಾ ನಾಳೆ ತತ್‌ಕ್ಷಣ ಜಿಲ್ಲಾಧಿಕಾರಿಗಳೊಡನೆ ಮಾತನಾಡಿ, ಅವರಿಂದ ಒಂದು ವರದಿಯನ್ನು ಸರ್ಕಾರ ತರಿಸಿಕೊಳ್ಳುತ್ತದೆ.

12.40 ಪಿಎಂ

ವರದಿಯನ್ನು ತರಿಸಿಕೊಂಡು ಮಳೆಯಿಂದ ನಷ್ಟವಾಗಿರುವ ಕಡೆಗಳಲ್ಲಿ ತತ್‌ಕ್ಷಣ ಏನು ಪರಿಹಾರ ತೆಗೆದುಕೊಳ್ಳ ಬೇಕೋ ಅದನ್ನೂ ಕೂಡ ನಾವು ತೆಗೆದುಕೊಳ್ಳುತ್ತೇವೆ. ರಸ್ತೆಗಳನ್ನು ಸರಿಪಡಿಸಲು ಮತ್ತು ಅಲ್ಲಿ ಆಗಿರತಕ್ಕಂಥ ನಷ್ಟದ ಬಗ್ಗೆ ಯಾವ ರೀತಿ ಪರಿಹಾರವನ್ನು ಕೊಡಬೇಕು ಎನ್ನುವ ಬಗ್ಗೆ ಇವತ್ತು ಸರ್ಕಾರದಲ್ಲಿ ಇರತಕ್ಕಂಥ ನಿಯಮಾವಳಿಗಳ ಪ್ರಕಾರ ನಾವು ಪ್ರಯತ್ನವನ್ನು ಮಾಡುತ್ತೇವೆ ಎನ್ನುವ ಭರವಸೆಯನ್ನು ಸಹ ನಾನು ಕೊಡುತ್ತೇನೆ. ತತ್‌ಕ್ಷಣ ಗಿರಿಜನರು ಬದುಕಲು ತಕ್ಷಣ ಟಾರ್ಪಾಲುಗಳನ್ನು ಹಾಕಿಕೊಡುಬೇಕು ಎಂದು ಹೇಳಿದ್ದಾರೆ. ಸಮಾಜ ಕಲ್ಯಾಣ ಇಲಾಖೆಯ ಮೂಲಕ ಅದನ್ನು ಮಾಡಲು ಅವಕಾಶವಿದೆಯೋ ಅಥವಾ ಜಿಲ್ಲಾ ಪಂಚಾಯಿತಿಯ ಮೂಲಕ ಮಾಡಲು ಅವಕಾಶವಿದೆಯೋ ಎನ್ನುವುದನ್ನು ನೋಡಿ, ಅದನ್ನೂ ಮಾಡುತ್ತೇವೆ ಎನತಕ್ಕಂಥ ಭರವಸೆಯನ್ನು ನಾನು ಈ ಸಂದರ್ಭದಲ್ಲಿ ಕೊಡುವುದರ ಜೊತೆಗೆ, ಗೌರವಾನ್ವಿತ ಸದಸ್ಯರುಗಳಿಗೆ ನನ್ನದೊಂದು ಕಿವಿ ಮಾತೆಂದರೆ, ತಾವು ವಿಚಾರವನ್ನು ಪ್ರಸ್ತಾಪ ಮಾಡುವಾಗ ಕೆಲವು ವಿಚಾರಗಳನ್ನು ಸ್ಪೆಸಿಫಿಕ್ ಆಗಿ ಹೇಳಿದ್ದೀರಿ. ಅದನ್ನು ಕಂದಾಯ ಸಚಿವರಿಗೆ ಬರೆದು ಕಳುಹಿಸಿದರೆ, ತುರ್ತಾಗಿ ಈ ಕೆಲಸವನ್ನು ಮಾಡಲು ಅನುಕೂಲವಾಗುತ್ತದೆ. ಆದ್ದರಿಂದ ತಾವು ದಯವಿಟ್ಟು ಅದನ್ನು ಮಾಡಬೇಕು ಎನ್ನುವ ಸಲಹೆಯನ್ನು ಕೊಡುತ್ತೇನೆ.

ಈ) ವಿಷಯ : ಕರಾವಳಿ ಪ್ರದೇಶಗಳಲ್ಲಿ ಕಡಲ ಕೊರೆತದಿಂದ ಉಂಟಾಗಿರುವ ಸಮಸ್ಯೆಗಳ ಬಗ್ಗೆ.

ಶ್ರೀ ಕೆ. ರಘುಪತಿ ಭಟ್ (ಉಡುಪಿ) : ಮಾನ್ಯ ಸಭಾಧ್ಯಕ್ಷರೇ, ಕರ್ನಾಟಕದ ಕರಾವಳಿ ತೀರದ ಬಹಳ ದೊಡ್ಡ ಸಮಸ್ಯೆಯನ್ನು ನಾನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಲು ಇಚ್ಛೈಪಡುತ್ತೇನೆ. ನಮ್ಮಲ್ಲಿ ಪ್ರತಿವರ್ಷ ಮಳೆಗಾಲದಲ್ಲಿ ಎದುರಿಸುವಂಥ ದೊಡ್ಡ ಸಮಸ್ಯೆ ಎಂದರೆ ಕಡಲ ಕೊರೆತದ ಸಮಸ್ಯೆ. ಮಳೆ ಪ್ರಾರಂಭವಾದ ದಿವಸದಿಂದ ಕಡಲ ಕಿನಾರೆಯಲ್ಲಿ ರಸ್ತೆ ಬಂದ್ ಆಗುವ ಮಟ್ಟಕ್ಕೆ ಕಡಲ ಕೊರೆತದ ಸಮಸ್ಯೆ ನಮ್ಮ ಜಿಲ್ಲೆಯಲ್ಲಿ ಮತ್ತು ಕರಾವಳಿ ತೀರದಲ್ಲಿ ಹಮ್ಮಿಕೊಂಡಿದೆ. ಮರವಂತೆ ಎನ್ನುವ ಜಾಗದಲ್ಲಿ ರಾಷ್ಟ್ರೀಯ ಹೆದ್ದಾರಿ–ಎನ್, ಹೆಜ್ : 17 ಕಟ್ ಆಗುವವರೆಗೆ ಕಡಲ ಕೊರೆತದ ಸಮಸ್ಯೆ ಉಲ್ಬಣವಾಗಿದೆ. ಅದೇ ರೀತಿ ಮಲ್ಪೆಯಲ್ಲಿ ಪ್ರಧಾನಮಂತ್ರಿ ಗ್ರಾಮೀಣ ಸಡಕೆ ಯೋಜನೆಯಲ್ಲಿ